

ದಿವ್ಯಸಂಗೀತ
ಕಥೆ: ಸ್ವಾಮಿ ರಾಘವೇಶಾನಂದ
ಚಿತ್ರ: ಶಂಕರ್
ತಾನ್‌ಸೇನ್ ಪ್ರಸಿದ್ಧ ಗಾಯಕ. ಆತ ದೆಹಲಿಯ ದೊರೆಯಾಗಿದ್ದ ಅಕ್ಬರನ ಆಸ್ಥಾನದಲ್ಲಿದ್ದ. ತಾನ್‌ಸೇನನ ಮೇಲೆ ಭಗವತಿಯ ಹಾಗೂ ಗುರುವಿನ ವಿಶೇಷ ಕೃಪೆಯಿತ್ತು.
ಒಮ್ಮೆ ತಾನ್‌ಸೇನನು ಅಕ್ಬರನ ಆಸ್ಥಾನದಲ್ಲಿ ಹಾಡುತ್ತಿದ್ದ. ಅಕ್ಬರ್ ಆತನ ಹಾಡುಗಾರಿಕೆಗೆ ಮಾರುಹೋಗಿದ್ದ.
1
ತಾನ್‌ಸೇನ್, ಹಾಡುವುದರಲ್ಲಿ ನಿನಗೆ ಸರಿಸಮರಾದವರು ಯಾರೂ ಇಲ್ಲ.
ಇಲ್ಲ, ಪ್ರಭು. ನನ್ನನ್ನು ಮೀರಿಸುವವರು ಒಬ್ಬರಿದ್ದಾರೆ.
ಯಾರು ಆತ? ಎಲ್ಲಿರುತ್ತಾನೆ?
2
ಅವರು ಸಾಮಾನ್ಯರಲ್ಲ. ಅವರು ದೊಡ್ಡ ಸಂತರು. ಅವರ ಹೆಸರು ಹರಿದಾಸ. ಬೃಂದಾವನದಲ್ಲಿರುತ್ತಾರೆ. ಅವರೇ ನನ್ನ ಗುರುದೇವರು.
ಮಂತ್ರಿಯೊಬ್ಬ ನಿಂತುಕೊಂಡು .........
ಅವರನ್ನೇಕೆ ನಮ್ಮ ಆಸ್ಥಾನಕ್ಕೆ ಆಮಂತ್ರಿಸಬಾರದು ?
3
ಅವರು ಬೃಂದಾವನದಿಂದ ಕದಲುವುದಿಲ್ಲ. ಅನೇಕರು ಪ್ರಯತ್ನಿಸಿ ವಿಫಲರಾಗಿದ್ದಾರೆ.
ಅಕ್ಬರ್ ದೀರ್ಘವಾದ ಆಲೋಚನೆಯಲ್ಲಿ ಮುಳುಗಿದ
4
ದೊರೆ ಮನಸ್ಸು ಮಾಡಿದರೆ, ಅವರಿಗೆ ಇಲ್ಲಿಗೆ ಬರುವಂತೆ ಆದೇಶಿಸ ಬಹುದಲ್ಲವೆ?
ಸಂತರ ಬದುಕಿನಲ್ಲಿ ನಾವು ಹಾಗೆ ತಲೆ ಹಾಕಬಾರದು. ಆದರೆ ಅವರ ಸಂಗೀತವನ್ನು ಕೇಳುವ ಉಪಾಯ ಯಾವುದು?


5
ಖಂಡಿತ ಸಾಧ್ಯವಿದೆ. ದೊರೆಯೇನಾದರೂ ನನ್ನ ಶಿಷ್ಯನಂತೆ ವೇಷ ಮರೆಸಿಕೊಂಡು ಬಂದರೆ, ನನ್ನ ಗುರುವಿನ ಬಳಿಗೆ ಕೊಂಡೊಯ್ಯುತ್ತೇನೆ.
ಅದು ಒಳ್ಳೆಯ ಉಪಾಯ. ಅವರಿಗೆ ನಮನ ಸಲ್ಲಿಸಲು ನಾನೇ ಅವರಿರುವಲ್ಲಿಗೆ ಹೋಗುತ್ತೇನೆ.
ದೊರೆ ಅಕ್ಬರ್ ಮತ್ತು ತಾನ್‌ಸೇನ್ ಬೃಂದಾವನಕ್ಕೆ ಹೊರಟರು.
6
ನಿಮಗೆ ನಮ್ಮ ನಮನಗಳು.
ದೀರ್ಘಕಾಲ ಚೆನ್ನಾಗಿ ಬಾಳಿ.
ಅಂದು ಸಂಜೆ ತಾನ್‌ಸೇನ್ ತನ್ನ ಗುರುವಿನ ಮುಂದೆ ಹಾಡತೊಡಗಿದ. ಹಾಡುವಾಗ ಬೇಕೆಂದೇ ಕೆಲವು ತಪ್ಪುಗಳನ್ನು ಮಾಡಿದ.
7
ತಾನ್‌ಸೇನ್! ನೀನು ಹಾಡುತ್ತಿರುವ ರೀತಿ ಸರಿಯಿಲ್ಲ. ಹೀಗೆ ಹಾಡು!
ಸಂತ ಹರಿದಾಸರು ಹಾಡಲು ತೊಡಗಿದರು. ಅವರ ಹಾಡನ್ನು ಕೇಳುತ್ತ ದೊರೆ ತನ್ನನ್ನೇ ಮರೆತ.
8
ಸಾಕ್ಷಾತ್ ದೇವರೇ ಹಾಡುತ್ತಿರುವಂತಿದೆ.



ಹಾಡುತ್ತಾ ಹಾಡುತ್ತಾ ಸಂತ ಹರಿದಾಸರು ಧ್ಯಾನದಲ್ಲಿ ಮಗ್ನನಾಗಿ ಬಾಹ್ಯಪ್ರಜ್ಞಾಶೂನ್ಯರಾದರು.
9
ಪ್ರಭೋ! ಏಕಿಷ್ಟು ಆಶ್ಚರ್ಯವಾಗಿದೆ ನಿಮಗೆ? ದಯವಿಟ್ಟು ನನಗೆ ಹೇಳಿ.
ತಾನ್‌ಸೇನ್, ಇಂತಹ ಗುರುವನ್ನು ಪಡೆದಿರುವ ನೀನು ನಿಜವಾಗಿಯೂ ಧನ್ಯ! ನಿನ್ನ ಗುರುವಿನ ಸಂಗೀತ ಕಲ್ಲನ್ನೂ ಕರಗಿಸುವಂಥದ್ದು. ಇಂತಹ ದಿವ್ಯಕಂಠವನ್ನು ಅವರು ಹೇಗೆ ಪಡೆದರು?
ತಾನ್‌ಸೇನ್ ತನ್ನ ಗುರು ಚೇತರಿಸಿಕೊಳ್ಳುವಂತೆ ಗಾಳಿ ಬೀಸಿದ.
10
ಪ್ರಭೋ! ಇದು ಬಹಳ ಸರಳವಾಗಿದೆ. ನನ್ನ ಗುರು ನನ್ನಂತೆ ಮನುಷ್ಯರಿಗಾಗಿ ಹಾಡುವುದಿಲ್ಲ. ಅವರು ಭಗವಂತನನ್ನು ತೃಪ್ತಿಪಡಿಸಲಷ್ಟೇ ಹಾಡುತ್ತಾರೆ.
11
ಅದು ನಿಜ. ಅದು ದೇವರಿಗಷ್ಟೇ ಹಾಡುವ ಸಂಗೀತವಾದ್ದರಿಂದ ಅದು ದಿವ್ಯಸಂಗೀತವಾಗಿದೆ.
ಜೈ ಶ್ರೀ ಗುರುದೇವ!
12
ಸಂತ ಹರಿದಾಸರಿಗೆ ನಿಧಾನವಾಗಿ ಬಾಹ್ಯಪ್ರಜ್ಞೆ ಮರಳಿತು.
ಗುರುದೇವ! ಈತ ದೊರೆಯಾದ ಅಕ್ಬರ್. ಇವರು ತಮ್ಮ ಸಂಗೀತವನ್ನು ಕೇಳಲು ನನ್ನ ಶಿಷ್ಯನಂತೆ ವೇಷ ಮರೆಸಿಕೊಂಡು ಬಂದಿದ್ದಾರೆ. ನಮ್ಮನ್ನು ಆಶೀರ್ವದಿಸಿ.
ಎಲ್ಲೆಲ್ಲೂ ಭಗವಂತನ ವಿನಾ ನಾನು ಬೇರಾರನ್ನೂ ಕಾಣುತ್ತಿಲ್ಲ. ಭಗವಂತನ ಲೀಲೆ ಅಪಾರವಾದುದು.
ಅಕ್ಬರ್ ಮತ್ತು ತಾನ್‌ಸೇನ್ ದೆಹಲಿಗೆ ಹಿಂದಿರುಗಿದರು. ಆದರೆ ಸಂತ ಹರಿದಾಸರ ದಿವ್ಯ ಸಂಗೀತ ಅವರ ಕಿವಿಯಲ್ಲಿ ಮೊಳಗುತ್ತಿತ್ತು.
13
ಸಂತ ಹರಿದಾಸರ ಸಂಗೀತ ನನ್ನನ್ನು ಪರಿವರ್ತಿಸಿದೆ. ನನಗೆ ಅಲ್ಲಾನಿಗೂ ಮತ್ತು ಶ್ರೀಹರಿಗೂ ವ್ಯತ್ಯಾಸವೇ ಕಾಣುತ್ತಿಲ್ಲ. ನಿನಗೆ ಬಹಳ ಧನ್ಯವಾದಗಳು!
ಜೈ ಶ್ರೀ ಗುರುದೇವ! ಜೈ ಶ್ರೀ ಹರಿ!
ಸಂತ ಹರಿದಾಸರ ದಿವ್ಯ ಸಂಗೀತ ಇಂದೂ ಬೃಂದಾವನದಲ್ಲಿ ಮಾರ್ದನಿಗೊಳ್ಳುತ್ತಿದೆ.
14